ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/28/2015-16. ದಿನಾಂಕ:22-08-2016.

| ವಾದಿಗಳು | ಪ್ರತಿವಾದಿಗಳು |
|---|---|
| ದೇವಕ್ಕಿ ತಿಪ್ಪೇಸ್ವಾಮಿ ತಂದೆ ಲೇಟ್ ದೇವಕ್ಕಿ ಕೊಟ್ರಣ್ಣ ಹಾರಕಬಾವಿ ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಬೆಳ್ಳಿಕಟ್ಟೆ ಗ್ರಾಮದ ಸನಂ 237. 389. 391ಬಿ. ವಿಸ್ತೀರ್ಣ 5-13. 6-08. 1-01. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಬೆಳ್ಳಿಕಟ್ಟೆ ಗ್ರಾಮದ ಸನಂ 237. 389. 391ಬಿ. ವಿಸ್ತೀರ್ಣ 5-13. 6-08. 1-01. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಹಾರಕಬಾವಿ ಗ್ರಾಮದ ದೇವಕ್ಕಿ ತಿಪೇಸ್ವಾಮಿ ತಂದೆ ಲೇಟ್ ದೇವಕ್ಕಿ ಕೊಟ್ರಣ್ಣ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಬೆಳ್ಳಿಕಟ್ಟೆ ಇವರು ನಮೂನೆ-21 ನೋಟಿಸನ್ನು ದಿನಾಂಕ 21-04-2014. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಶರಣಮ್ಮನ ಹೇಳಿಕೆ ಮತ್ತು ಪಟ್ಟದಾರರಾದ ದೇವಕ್ಕಿ ತಾತಯ್ಯ ಇವರು ಅವಿವಾಹಿತರು ಎಂಬ ಬಗ್ಗೆ ಗ್ರಾಮಲೆಕ್ಕಿಗರು ವರದಿ ನೀಡಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 29/2013-14. ದಿನಾಂಕ 22-05-2014. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 21-07-2015 ರಿಂದ 22-08-2016 ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಬೆಳ್ಳಿಕಟ್ಟೆ ಗ್ರಾಮದ ಸನಂ 237. 389. 391ಬಿ. ವಿಸ್ತೀರ್ಣ 5-13. 6-08. 1-01. ಎಕ್ರೆ ಜಮೀನುಗಳು ನಮ್ಮ ಅಣ್ಣನವರಾದ ದೇವಕ್ಕಿ ತಾತಯ್ಯ ತಂದೆ ಕೊಟ್ರಣ್ಣ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 30-06-2003 ರಂದು ಮರಣ ಹೊಂದಿದ್ದು ಇವರು ಅವಿವಾಹಿತರಾಗಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನಂತೆ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ವಂಶವೃಕ್ಷ ಹಾಜರು ಪಡಿಸಿರುವಂತೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

-:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಬೆಳ್ಳಿಕಟ್ಟೆ ಗ್ರಾಮದ ಸನಂ 237. 389. 391ಬಿ. ವಿಸ್ತೀರ್ಣ 5-13. 6-08. 1-01. ಎಕ್ರೆ ಜಮೀನುಗಳನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ದೇವಕ್ಕಿ ತಿಪ್ಪೇಸ್ವಾಮಿ ತಂದೆ ಲೇಟ್ ದೇವಕ್ಕಿ ಕೊಟ್ರಣ್ಣ ಹಾರಕಬಾವಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 22-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ದೇವಕ್ಕಿ ತಿಪ್ಪೇಸ್ವಾಮಿ ತಂದೆ ಲೇಟ್ ದೇವಕ್ಕಿ ಕೊಟ್ರಣ್ಣ ಹಾರಕಬಾಗಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.